ಓ.ಎಸ್.ನಂಃ 166/2021

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 09.04.2026 ರಂದು ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

1981 ನೇ ಇಸವಿಯ ಕ್ರಯ ಪತ್ರವನ್ನು ಹಾಜರುಪಡಿಸಿದ್ದೇನೆ. ಅರಸಮ್ಮನ ತಾಯಿಯ ಹೆಸರು ಗೋಕುಲಮ್ಮ. ನಮ್ಮ ಕ್ರಯ ಪತ್ರದಲ್ಲಿ ಸರ್ವೇ ನಂಃ 480 ಎಂದು ನಮೂದಾಗಿದೆ. ಸರ್ವೇ ನಂಃ 480, ಸರ್ವೇ ನಂಃ 430 ಆಗಿ ಬದಲಾವಣೆಯಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸರ್ವೇ ನಂಃ 480 ಮತ್ತು ಸರ್ವೇ ನಂಃ 430 ಗಳ ಪ್ರತ್ಯೇಕ ನಕ್ಷೆ ಮತ್ತು ಟಿಪ್ಪಣಿಗಳನ್ನು ಹಾಜರುಪಡಿಸಿದ್ದೇನೆ. ಸರ್ವೇ ನಂಃ 480 ಮತ್ತು ಸರ್ವೇ ನಂಃ 430 ಈ ಹಿಂದೆ ಯಾರ ಮಾಲೀಕತ್ವಕ್ಕೆ ಒಳಪಟ್ಟಿತ್ತು ಎಂದು ನನಗೆ ಗೊತ್ತಿಲ್ಲ. ಆದರೆ ನಾವು ಗೋಕುಲಮ್ಮನವರಿಂದ ಖರಿದಿ ಮಾಡಿದ್ದೇವೆ. ಗೋಕುಲಮ್ಮರವರಿಗೆ ಸದರಿ ಸ್ವತ್ತು ಹೇಗೆ ಬಂತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಗೋಕುಲಮ್ಮರವರ ಹೆಸರಿಗೆ ಇದ್ದ ದಾಖಲೆಗಳನ್ನು ಹಾಜರುಪಡಿಸಿಲ್ಲ.

ನಾನು, ಗೌರಮ್ಮ, ಚನ್ನಬಸವಶೆಟ್ಟಿ, ಮಹೇಶ ಮತ್ತು ಗೌರಮ್ಮ, ಈ ದಾವೆ ಹೂಡಿದ್ದೇವೆ. ನಾನು ಅರಸಮ್ಮನ ನನ್ನ ತಾಯಿ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. 1981 ರಲ್ಲಿ ಕ್ರಯ ಪತ್ರದಂತೆ ನನ್ನ ತಾಯಿ ಅರಸಮ್ಮರವರಿಗೆ ಖಾತಾ ಆಗಿದೆ. ಸರ್ವೇ ನಂಃ 430 ರಲ್ಲಿ ನನ್ನ ತಾಯಿ ಸ್ವಾಧೀನದಲ್ಲಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈಗ 7ನೇ ಪ್ರತಿವಾದಿ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು, ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. 7ನೇ ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ